रेलवे भर्ती बोर्ड | RAILWAY RECRUITMENT BOARD
सीईएन ०१/२०२६ सहायक लोको पायलट (एएलपी) के पद पर भर्ती
CEN 01/2026 Recruitment of Assistant Loco Pilot (ALP)

Test Date	03/11/2026
Test Time	12:30 PM - 1:30 PM
Subject	RRB ALP 2026 CBT 1

*** Note**
Correct Answer will carry 1 mark per Question.
Incorrect Answer will carry 1/3 Negative mark per Question.

1. Options shown in green color with a tick icon are correct.
2. Chosen option on the right of the question indicates the option selected by the candidate.

Section : **RRB ALP**

Q.1 ಒಂದು ನಿರ್ದಿಷ್ಟ ತರ್ಕವನ್ನು ಅನುಸರಿಸಿ 18 ಎಂಬುದು 325 ಕ್ಕೆ ಸಂಬಂಧಿಸಿದೆ. ಅದೇ ತರ್ಕವನ್ನು ಅನುಸರಿಸಿ 6 ಎಂಬುದು 37 ಕ್ಕೆ ಸಂಬಂಧಿಸಿದೆ. ಅದೇ ತರ್ಕವನ್ನು ಅನುಸರಿಸಿದಾಗ, 17 ಎಂಬುದು ಈ ಕೆಳಗಿನವುಗಳಲ್ಲಿ ಯಾವುದಕ್ಕೆ ಸಂಬಂಧಿಸಿದೆ?
(ಸೂಚನೆ: ಸಂಖ್ಯೆಗಳನ್ನು ಅವುಗಳ ಬಿಡಿ ಅಂಕಿಗಳಾಗಿ ವಿಭಜಿಸದೆ, ಪೂರ್ಣ ಸಂಖ್ಯೆಗಳ ಮೇಲೆ ಗಣಿತದ ಕ್ರಿಯೆಗಳನ್ನು ಮಾಡಬೇಕು. ಉದಾ. 13 – 13 ರ ಮೇಲೆ ಕೂಡಿಸುವುದು/ಕಳೆಯುವುದು/ ಗುಣಿಸುವುದು ಮುಂತಾದ ಕ್ರಿಯೆಗಳನ್ನು ಮಾಡುವಾಗ 13 ಎಂದು ಪರಿಗಣಿಸಿ ಕ್ರಿಯೆಗಳನ್ನು ಮಾಡಬಹುದು. 13 ಅನ್ನು 1 ಮತ್ತು 3 ಎಂದು ಬೇರೆ ಬೇರೆಯಾಗಿ ಪರಿಗಣಿಸಿ ನಂತರ 1 ಮತ್ತು 3 ರ ಮೇಲೆ ಬೇರೆ ಬೇರೆಯಾಗಿ ಗಣಿತದ ಕ್ರಿಯೆಗಳನ್ನು ಮಾಡುವಂತಿಲ್ಲ.)

Ans
- ✗ A. 291
- ✗ B. 288
- ✓ C. 290
- ✗ D. 292

Q.2 ಒಂದು ವೇಳೆ ಅನುಲೇಪಕ ಅಂಗಾಂಶವು ಹಾನಿಗೊಳಗಾಗಿ, ಅದರ ಆಧಾರವಾಗಿರುವ ಅಂಗಾಂಶಗಳು ಒಡ್ಡಿಕೊಳ್ಳಲ್ಪಟ್ಟರೆ, ತಕ್ಷಣದ ಸಂಭವನೀಯ ಪರಿಣಾಮವೇನು?

Ans
- ✗ A. ದ್ರವ್ಯಗಳ ಹೀರಿಕೊಳ್ಳುವಿಕೆಯು ಹೆಚ್ಚಾಗುವುದು
- ✗ B. ಹಾನಿಗೊಳಗಾದ ಅಂಗಾಂಶಗಳ ತಕ್ಷಣದ ಗುಣಪಡಿಸುವಿಕೆ
- ✗ C. ಹಾರ್ಮೋನುಗಳ ಸ್ರವಿಸುವಿಕೆ ಹೆಚ್ಚಾಗುವುದು
- ✓ D. ರೋಗಾಣು ಜೀವಿಗಳ ಪ್ರವೇಶ ಮತ್ತು ಸೋಂಕಿನ ಅಪಾಯ ಹೆಚ್ಚಾಗುವುದು

Q.3 ಕೆಳಗಿನ ಅಕ್ಷರ ಸರಣಿಯನ್ನು ಪರಿಶೀಲಿಸಿ ಮತ್ತು ಕೇಳಿರುವ ಪ್ರಶ್ನೆಗೆ ಉತ್ತರಿಸಿ

(ಎಡ) B E H K M Z U X J C A P D F W J I V N U R O Y (ಬಲ)

ತನ್ನ ತಕ್ಷಣದ ಹಿಂದೆ ಮತ್ತು ತನ್ನ ತಕ್ಷಣದ ಮುಂದೆ ಸ್ವರಾಕ್ಷರವನ್ನು ಹೊಂದಿರುವಂತಹ ಎಷ್ಟು ವ್ಯಂಜನಾಕ್ಷರಗಳು ಇಲ್ಲಿವೆ?

Ans
- ✗ A. ಯಾವುದೂ ಇಲ್ಲ
- ✓ B. ಒಂದು
- ✗ C. ಮೂರು
- ✗ D. ಎರಡು

Q.4 x ಎಂಬುದು ಒಂದು ವಾಸ್ತವ ಸಂಖ್ಯೆಯಾಗಿದ್ದರೆ ಮತ್ತು Sin A = $\frac{x}{\sqrt{x^2+1}}$, tan B = $\frac{\sqrt{x^2+2}}{x}$ ಆಗಿದೆ. ಒಂದು ವೇಳೆ Sec^2 A + $Cosec^2$ B = $\frac{85}{36}$ ಆಗಿದ್ದರೆ, $32x^4+5$ ಯ ಮೌಲ್ಯವನ್ನು ಕಂಡುಹಿಡಿಯಿರಿ.

Ans
- ✗ A. 9.6
- ✗ B. 11
- ✓ C. 7
- ✗ D. 12

Q.5 ಒಬ್ಬ ಅಂಗಡಿಯವರು ತನ್ನ ಸರಕುಗಳನ್ನು ಅಸಲು ಬೆಲೆಗಿಂತ ಒಂದು ನಿರ್ದಿಷ್ಟ ಶೇಕಡಾವಾರು ಹೆಚ್ಚು ನಮೂದಿಸುತ್ತಾರೆ. ನಮೂದಿತ ಬೆಲೆಯ ಮೇಲೆ 15% ರಿಯಾಯಿತಿ ನೀಡಿದ ನಂತರವೂ, ಅವರು 5% ಲಾಭವನ್ನು ಗಳಿಸುತ್ತಾರೆ. ಹಾಗಾದರೆ ಅವರು ತನ್ನ ಸರಕುಗಳನ್ನು ಅಸಲು ಬೆಲೆಗಿಂತ ಎಷ್ಟು ಶೇಕಡಾ ಹೆಚ್ಚು ನಮೂದಿಸಿದ್ದಾರೆ? (ಉತ್ತರವನ್ನು ಎರಡು ದಶಮಾಂಶ ಸ್ಥಾನಗಳಿಗೆ ಪೂರ್ಣಾಂಕಗೊಳಿಸಿ.)

Ans
- ✗ A. 17.04%
- ✗ B. 30.37%
- ✗ C. 20.28%
- ✓ D. 23.53%

Q.6 ಈ ಕೆಳಗಿನ ಸಮೀಕರಣದಲ್ಲಿ, ಒಂದು ವೇಳೆ 'A' ಎಂದರೆ '÷', 'B' ಎಂದರೆ '×', 'C' ಎಂದರೆ '+' ಮತ್ತು 'D' ಎಂದರೆ '−' ಆಗಿದ್ದರೆ, ಪ್ರಶ್ನಾರ್ಥಕ ಚಿಹ್ನೆಯ (?) ಸ್ಥಳದಲ್ಲಿ ಏನು ಬರುತ್ತದೆ?

1 B 2 D 6 A 2 C 3 = ?

Ans
- ✗ A. 3
- ✗ B. 5
- ✓ C. 2
- ✗ D. 4

Q.7 ಈ ಪ್ರಶ್ನೆಯು ಈ ಕೆಳಗಿನ ಪದಗಳನ್ನು ಆಧರಿಸಿದೆ

COX VIE IRE HOD

ಪ್ರತಿ ಪದದಲ್ಲಿ, ಪ್ರತಿ ಸ್ವರಾಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಅನುಕ್ರಮದಲ್ಲಿ ಅದರ ಹಿಂದಿನ ಎರಡನೇ ಅಕ್ಷರದೊಂದಿಗೆ ಬದಲಾಯಿಸಲಾಗುತ್ತದೆ ಮತ್ತು ಪ್ರತಿ ವ್ಯಂಜನಾಕ್ಷರವನ್ನು ಆಂಗ್ಲ ವರ್ಣಮಾಲೆಯ ಅನುಕ್ರಮದಲ್ಲಿ ಅದರ ತಕ್ಷಣದ ಮುಂದಿನ ಅಕ್ಷರದೊಂದಿಗೆ ಬದಲಾಯಿಸಲಾಗುತ್ತದೆ. ಈ ರೀತಿಯಾಗಿ ರಚನೆಯಾಗುವ ಎಷ್ಟು ಅಕ್ಷರ-ಗುಚ್ಛಗಳಲ್ಲಿ ಯಾವುದೇ ಸ್ವರಾಕ್ಷರವು ಇರುವುದಿಲ್ಲ?

Ans
- ✓ A. ಮೂರು
- ✗ B. ಒಂದು
- ✗ C. ಎರಡು
- ✗ D. ನಾಲ್ಕು

Q.8 ಒಂದುವೇಳೆ 'A' ಎಂದರೆ '÷', 'B' ಎಂದರೆ '×', 'C' ಎಂದರೆ '+' ಮತ್ತು 'D' ಎಂದರೆ '−' ಎಂದಾದರೆ, ಕೆಳಗಿನ ಸಮೀಕರಣದಲ್ಲಿನ ಪ್ರಶ್ನಾರ್ಥಕ ಚಿಹ್ನೆಯ (?) ಸ್ಥಾನದಲ್ಲಿ ಯಾವ ಸಂಖ್ಯೆ ಬರುತ್ತದೆ?

25 D 8 B 12 A 6 C 34 = ?

Ans
- ✓ A. 43
- ✗ B. 41
- ✗ C. 45
- ✗ D. 44

blackbook

Q.9 ಒಬ್ಬ ವ್ಯಕ್ತಿಯು 37 km/hr ವೇಗದಲ್ಲಿ ಸ್ವಲ್ಪ ಸಮಯ ಪ್ರಯಾಣಿಸುತ್ತಾನೆ ಮತ್ತು 58 km/hr ವೇಗದಲ್ಲಿ ಅಷ್ಟೇ ಸಮಯ ಪ್ರಯಾಣಿಸುತ್ತಾನೆ. ಹಾಗಾದರೆ ಇಡೀ ಪ್ರಯಾಣದ ಸರಾಸರಿ ವೇಗ ಎಷ್ಟು?

Ans
- ✗ A. 48 km/hr
- ✗ B. 42 km/hr
- ✓ C. 47.5 km/hr
- ✗ D. 45.5 km/hr

Q.10 ಒಂದು ಕಾರಿನ ರೇಡಿಯೇಟರ್ 62% ಘನೀಕರಣರೋಧಕ ದ್ರಾವಣವನ್ನು ಹೊಂದಿರಬೇಕು. ಒಬ್ಬ ವಾಹನ ಚಾಲಕನು 13 ಲೀಟರ್ ಗಳ 33% ಘನೀಕರಣರೋಧಕ ದ್ರಾವಣವನ್ನು ಹೊಂದಿದ್ದಾನೆ. ಅವನು 62% ಘನೀಕರಣರೋಧಕ ದ್ರಾವಣವನ್ನು ತಯಾರಿಸಲು ಎಷ್ಟು ಲೀಟರ್ 97% ಘನೀಕರಣರೋಧಕ ದ್ರಾವಣವನ್ನು (2 ದಶಮಾಂಶ ಸ್ಥಾನಗಳ ಪೂರ್ಣಾಂಕಕ್ಕೆ ಸರಿಹೊಂದಿಸಿದೆ) ತನ್ನ ದ್ರಾವಣಕ್ಕೆ ಸೇರಿಸಬೇಕು?

Ans
- ✗ A. 7.76
- ✗ B. 14.64
- ✗ C. 13.29
- ✓ D. 10.77

Q.11 ₹5,000 ಮೊತ್ತವನ್ನು ಸ್ಥಿರ ಠೇವಣಿ ಖಾತೆಯಲ್ಲಿ 3 ವರ್ಷಗಳ ಅವಧಿಗೆ ವಾರ್ಷಿಕ 6% ಚಕ್ರಬಡ್ಡಿ ದರದಲ್ಲಿ (ಅರ್ಧ ವಾರ್ಷಿಕವಾಗಿ ಚಕ್ರಬಡ್ಡಿಯನ್ನು ಲೆಕ್ಕ ಹಾಕುವ ವಿಧಾನದಲ್ಲಿ) ಇಡಲಾಗುತ್ತದೆ. ಹಾಗಾದರೆ ವಾಯಿದೆ ಮುಕ್ತಾಯದಲ್ಲಿ ಸಿಗುವ ಮೊತ್ತ ಎಷ್ಟು (ಹತ್ತಿರದ ಪೂರ್ಣಾಂಕಕ್ಕೆ ಸೀಮಿತಗೊಳಿಸಿ)?

Ans
- ✗ A. ₹6,100
- ✓ B. ₹5,970
- ✗ C. ₹5,940
- ✗ D. ₹6,050

Q.12 ಕಾಂತಕ್ಷೇತ್ರದ ಸಾಪೇಕ್ಷ ಬಲವನ್ನು ಯಾವುದರ ಪ್ರಮಾಣದಿಂದ (Degree of _____) ಸೂಚಿಸಲಾಗುತ್ತದೆ?

Ans
- ✗ A. ಒಳಗೊಂಡಿರುವ ಧ್ರುವಗಳ ಸಂಖ್ಯೆ
- ✗ B. ಚೂರುಗಳ ಬಣ್ಣ
- ✓ C. ಕಾಂತಿಯ ಬಲ ರೇಖೆಗಳ ದಟ್ಟಣೆ
- ✗ D. ಕಾಂತಿಯ ಬಲ ರೇಖೆಗಳ ಉದ್ದ

Q.13 ₹10,000 ಮೊತ್ತವನ್ನು ವಾರ್ಷಿಕ 10% ದರದಲ್ಲಿ 2 ವರ್ಷಗಳ ಅವಧಿಗೆ ಹೂಡಿಕೆ ಮಾಡಲಾಗುತ್ತದೆ. 2 ವರ್ಷಗಳ ಕೊನೆಯಲ್ಲಿ ಗಳಿಸಿದ ಚಕ್ರಬಡ್ಡಿ (ವಾರ್ಷಿಕವಾಗಿ ಚಕ್ರಬಡ್ಡಿಯನ್ನು ಲೆಕ್ಕ ಹಾಕುವ ವಿಧಾನದಲ್ಲಿ) ಮತ್ತು ಸರಳ ಬಡ್ಡಿಯ ನಡುವಿನ ವ್ಯತ್ಯಾಸ ಎಷ್ಟು?

Ans
- ✓ A. ₹100
- ✗ B. ₹50
- ✗ C. ₹150
- ✗ D. ₹200

Q.14 ಒಂದುವೇಳೆ $4x + 5y = 174$ ಮತ್ತು $\frac{3x}{2y} = \frac{12}{11}$ ಆಗಿದ್ದರೆ, $y^2 - x^2$ ನ ಮೌಲ್ಯ ಎಷ್ಟು?

Ans
- ✗ A. 154
- ✓ B. 228
- ✗ C. 208
- ✗ D. 168

Q.15 ಅನಿಲ್ ಅವರು A ಬಿಂದುವಿನಿಂದ ಚಾಲನೆ ಮಾಡಲು ಪ್ರಾರಂಭಿಸುತ್ತಾರೆ ಮತ್ತು ಪೂರ್ವಕ್ಕೆ 10 km ಚಲಿಸುತ್ತಾರೆ. ನಂತರ ಅವರು ಬಲಕ್ಕೆ ತಿರುಗಿ 7 km ಚಲಿಸುತ್ತಾರೆ, ನಂತರ ಬಲಕ್ಕೆ ತಿರುಗಿ 13 km ಚಲಿಸುತ್ತಾರೆ. ನಂತರ ಅವರು ಬಲಕ್ಕೆ ತಿರುಗಿ 12 km ಚಲಿಸುತ್ತಾರೆ. ಅವರು ಅಂತಿಮವಾಗಿ ಬಲಕ್ಕೆ ತಿರುಗಿ 3 km ಚಲಿಸುತ್ತಾರೆ ಮತ್ತು P ಬಿಂದುವಿನಲ್ಲಿ ನಿಲ್ಲುತ್ತಾರೆ. ಹಾಗಾದರೆ ಅವರು ಮತ್ತೆ A ಬಿಂದುವನ್ನು ತಲುಪಲು ಎಷ್ಟು ದೂರ (ಅತ್ಯಂತ ಕಡಿಮೆ ದೂರ) ಮತ್ತು ಯಾವ ದಿಕ್ಕಿನಲ್ಲಿ ಚಾಲನೆ ಮಾಡಬೇಕು? (ನಿರ್ದಿಷ್ಟವಾಗಿ ಹೇಳಿರುವುದನ್ನು ಬಿಟ್ಟು ಉಳಿದೆಲ್ಲಾ ತಿರುವುಗಳು ಕೇವಲ 90° ತಿರುವುಗಳಾಗಿವೆ)

Ans

✗ A. 4 km ದಕ್ಷಿಣಕ್ಕೆ

✓ B. 5 km ದಕ್ಷಿಣಕ್ಕೆ

✗ C. 2 km ದಕ್ಷಿಣಕ್ಕೆ

✗ D. 3 km ದಕ್ಷಿಣಕ್ಕೆ

Q.16 ಈ ಕೆಳಗೆ ನೀಡಿರುವ ಅಕ್ಷರ ಮತ್ತು ಚಿಹ್ನೆಗಳನ್ನೊಳಗೊಂಡ ಸರಣಿಯನ್ನು ಪರಿಶೀಲಿಸಿ ಮತ್ತು ಆನಂತರದ ಪ್ರಶ್ನೆಗೆ ಉತ್ತರಿಸಿ. ಎಣಿಕೆಯನ್ನು ಎಡದಿಂದ ಬಲಕ್ಕೆ ಮಾತ್ರ ಮಾಡಬೇಕು.

(ಎಡ) F & R T @ J Y C * S # U K L P $ B M (ಬಲ)

ಪ್ರತಿಯೊಂದೂ ತನ್ನ ತಕ್ಷಣದ ಹಿಂದೆಯೂ ಚಿಹ್ನೆಯನ್ನು ಮತ್ತು ಪ್ರತಿಯೊಂದೂ ತನ್ನ ತಕ್ಷಣದ ಮುಂದೆಯೂ ಚಿಹ್ನೆಯನ್ನು ಹೊಂದಿರುವ ಎಷ್ಟು ಅಕ್ಷರಗಳು ಇಲ್ಲಿವೆ?

Ans

✗ A. ಮೂರು

✗ B. ಎರಡು

✓ C. ಒಂದು

✗ D. ಯಾವುದೂ ಇಲ್ಲ

Q.17 ಒಂದು ವಿಶಿಷ್ಟ ಸಂಕೇತ ಭಾಷೆಯಲ್ಲಿ, 'HVBN' ಅನ್ನು '46' ಎಂದು ಸಂಕೇತಿಸಲಾಗಿದೆ ಮತ್ತು 'LAQJ' ಅನ್ನು '40' ಎಂದು ಸಂಕೇತಿಸಲಾಗಿದೆ. ಹಾಗಾದರೆ ಕೊಟ್ಟಿರುವ ಸಂಕೇತ ಭಾಷೆಯಲ್ಲಿ 'ITCR' ಎಂಬುದರ ಸಂಕೇತವೇನು?

Ans

✗ A. 56

✗ B. 41

✗ C. 44

✓ D. 50

Q.18 PQ || RS ಆಗಿದ್ದು, AB ಯು X ನಲ್ಲಿ PQ ಅನ್ನು ಮತ್ತು Y ನಲ್ಲಿ RS ಅನ್ನು ಸ್ಪರ್ಶಿಸುವ ಛೇದಕ ರೇಖೆಯಾಗಿದೆ. ಒಂದು ವೇಳೆ ∠PXA = 120° ಆಗಿದ್ದರೆ, ∠PXY ಅನ್ನು ಕಂಡುಹಿಡಿಯಿರಿ.

Ans

✗ A. 90°

✓ B. 60°

✗ C. 30°

✗ D. 120°

Q.19 ಪಿಹು, ಕುನೂರ್, ರೀಟಾ, ಸಿಯಾ, ಟೀನಾ, ಉಮೇಶ್ ಮತ್ತು ವಿವೇಕ್ ಎಂಬ ಏಳು ಜನರು ಒಂದು ವೃತ್ತಾಕಾರದ ಮೇಜಿನ ಸುತ್ತಲೂ ಮಧ್ಯಕ್ಕೆ ಮುಖ ಮಾಡಿ ಕುಳಿತಿದ್ದಾರೆ. ಉಮೇಶ್ ಅವರು ಸಿಯಾ ಅವರ ಬಲಕ್ಕೆ ಎರಡನೇ ಸ್ಥಾನದಲ್ಲಿ ಮತ್ತು ಕುನೂರ್ ಅವರ ಎಡಕ್ಕೆ ಎರಡನೇ ಸ್ಥಾನದಲ್ಲಿ ಕುಳಿತಿದ್ದಾರೆ. ವಿವೇಕ್ ಅವರು ಕುನೂರ್ ಅವರ ಎಡಕ್ಕೆ ಮೂರನೇ ಸ್ಥಾನದಲ್ಲಿ ಕುಳಿತಿದ್ದಾರೆ. ಪಿಹು ಅವರು ಟೀನಾ ಅವರ ಬಲಕ್ಕೆ ಎರಡನೇ ಸ್ಥಾನದಲ್ಲಿ ಕುಳಿತಿದ್ದಾರೆ. ಹಾಗಾದರೆ ಟೀನಾ ಅವರ ಎಡದಿಂದ ಎಣಿಸಿದಾಗ ಸಿಯಾ ಮತ್ತು ಟೀನಾ ಅವರ ನಡುವೆ ಎಷ್ಟು ಜನರು ಕುಳಿತಿದ್ದಾರೆ?

Ans

✗ A. ಮೂವರು

✗ B. ಯಾರೂ ಇಲ್ಲ

✓ C. ಇಬ್ಬರು

✗ D. ಒಬ್ಬರು

Q.20 ಟೋನಿ ಮತ್ತು ಕ್ರಿಸ್ ಅವರ ಪ್ರಸ್ತುತ ವಯಸ್ಸುಗಳ ಮೊತ್ತ 20 ವರ್ಷಗಳು. ಇಂದಿನಿಂದ ನಾಲ್ಕು ವರ್ಷಗಳ ಹಿಂದೆ, ಕ್ರಿಸ್ ಅವರ ವಯಸ್ಸು ಟೋನಿ ಅವರ ವಯಸ್ಸಿನ ಅರ್ಧದಷ್ಟಿತ್ತು. ಹಾಗಾದರೆ ಟೋನಿ ಅವರ ಪ್ರಸ್ತುತ ವಯಸ್ಸು (ವರ್ಷಗಳಲ್ಲಿ) ಎಷ್ಟು?

Ans
✗ A. 17
✓ B. 12
✗ C. 5
✗ D. 2

Q.21 ಈ ಕೆಳಗೆ ಎರಡು ಸಂಖ್ಯಾ ಗಣಗಳನ್ನು ನೀಡಲಾಗಿದೆ. ಈ ಪ್ರತಿಯೊಂದು ಸಂಖ್ಯಾ ಗಣದಲ್ಲಿ, ಮೊದಲ ಸಂಖ್ಯೆಯ ಮೇಲೆ ಒಂದು ನಿರ್ದಿಷ್ಟ ಗಣಿತದ ಕ್ರಿಯೆಯನ್ನು ನಡೆಸುವ ಮೂಲಕ ಎರಡನೇ ಸಂಖ್ಯೆಯನ್ನು ಪಡೆಯಲಾಗಿದೆ. ಅದೇ ರೀತಿಯಲ್ಲಿ, ಎರಡನೇ ಸಂಖ್ಯೆಯ ಮೇಲೆ ಒಂದು ನಿರ್ದಿಷ್ಟ ಗಣಿತದ ಕ್ರಿಯೆಯನ್ನು ನಡೆಸುವ ಮೂಲಕ ಮೂರನೇ ಸಂಖ್ಯೆಯನ್ನು ಪಡೆಯಲಾಗಿದೆ, ಮತ್ತು ಈ ಪ್ರಕ್ರಿಯೆಯು ಹೀಗೆಯೇ ಮುಂದುವರೆಯುತ್ತದೆ. ಹಾಗಾದರೆ ಈ ಕೆಳಗಿನ ಯಾವ ಆಯ್ಕೆಯು ಪ್ರಶ್ನೆಯಲ್ಲಿರುವ ಸಂಖ್ಯಾ ಗಣಗಳ ರೀತಿಯ ಗಣಿತದ ಕ್ರಿಯೆಯನ್ನು ಅನುಸರಿಸುತ್ತದೆ?
(ಸೂಚನೆ – ಕ್ರಿಯೆಗಳನ್ನು ನಡೆಸುವಾಗ ಎರಡು/ಮೂರು ಅಂಕಿಗಳ ಸಂಖ್ಯೆಯನ್ನು ಬೇರೆ ಬೇರೆ ಪ್ರತ್ಯೇಕ ಅಂಕಿಗಳಾಗಿ ವಿಭಜಿಸುವಂತಿಲ್ಲ. ಉದಾಹರಣೆಗೆ 37 ರ ನಂತರ 10 ಬಂದರೆ, ಕ್ರಿಯೆಯು 3+7 ಆಗಿರಬಾರದು, ಏಕೆಂದರೆ ಎರಡು ಅಂಕಿಗಳ ಸಂಖ್ಯೆಯನ್ನು ಬೇರೆ ಬೇರೆ ಪ್ರತ್ಯೇಕ ಅಂಕಿಗಳಾಗಿ ವಿಭಜಿಸುವಂತಿಲ್ಲ)
39 - 273 - 278 - 277
30 - 210 - 215 - 214

Ans
✗ A. 10 - 82 - 87 - 86
✓ B. 27 - 189 - 194 - 193
✗ C. 1 - 8 - 13 - 14
✗ D. 16 - 114 - 121 - 120

Q.22 ಒಂದು ಶಬ್ದ ತರಂಗವು 500 Hz ಆವರ್ತನವನ್ನು ಹೊಂದಿದೆ ಮತ್ತು ಪ್ರತಿ ಸೆಕೆಂಡಿಗೆ 340 ಮೀಟರ್ ವೇಗದಲ್ಲಿ ಚಲಿಸುತ್ತದೆ. ಒಂದು ವೇಳೆ ಆವರ್ತನವನ್ನು 250 Hz ಗೆ ಇಳಿಸಿದರೆ, ವೇಗವು ಬದಲಾಗದೆ ಉಳಿದಿದೆ ಎಂದು ಊಹಿಸಿಕೊಂಡರೆ, ತರಂಗದೂರವು ಎಷ್ಟಾಗುತ್ತದೆ?

Ans
✗ A. ಅದು ಶೂನ್ಯವಾಗುತ್ತದೆ
✗ B. ಅದು ಅರ್ಧದಷ್ಟಾಗುತ್ತದೆ
✓ C. ಅದು ದುಪ್ಪಟ್ಟಾಗುತ್ತದೆ
✗ D. ಅದು ಬದಲಾಗುವುದಿಲ್ಲ

Q.23 ಈ ಪ್ರಶ್ನೆಯಲ್ಲಿ, ಒಂದು ಪ್ರಶ್ನೆ ಮತ್ತು (I) ಮತ್ತು (II) ಎಂಬ ಎರಡು ಹೇಳಿಕೆಗಳನ್ನು ನೀಡಲಾಗಿದೆ. ಈ ಹೇಳಿಕೆಗಳಲ್ಲಿ ನೀಡಲಾದ ಮಾಹಿತಿಯು ಪ್ರಶ್ನೆಗೆ ಉತ್ತರಿಸಲು ಸಾಕಾಗುತ್ತದೆಯೇ ಎಂಬುದನ್ನು ನೀವು ನಿರ್ಧರಿಸಬೇಕು. ಈ ಎರಡೂ ಹೇಳಿಕೆಗಳನ್ನು ಗಮನವಿಟ್ಟು ಓದಿರಿ ಮತ್ತು ಸೂಕ್ತವಾದ ಉತ್ತರ ಯಾವುದೆಂದು ನಿರ್ಧರಿಸಿ.

ಪ್ರಶ್ನೆ:
E, B, I, C ಮತ್ತು Q ಎಂಬ 5 ಕೋಲುಗಳಲ್ಲಿ, ಪ್ರತಿಯೊಂದೂ ವಿಭಿನ್ನ ಎತ್ತರವನ್ನು ಹೊಂದಿವೆ. ಯಾವ ಕೋಲು ಅತ್ಯಂತ ಎತ್ತರವಾಗಿದೆ?

ಹೇಳಿಕೆಗಳು:
(I) E ಕೋಲು B ಗಿಂತ ಚಿಕ್ಕದಾಗಿದೆ, ಆದರೆ I ಗಿಂತ ಎತ್ತರವಾಗಿದೆ.
(II) I ಕೋಲು C ಗಿಂತ ಎತ್ತರವಾಗಿದೆ, ಆದರೆ Q ಗಿಂತ ಚಿಕ್ಕದಾಗಿದೆ.

Ans
✗ A. ಪ್ರಶ್ನೆಗೆ ಉತ್ತರಿಸಲು ಹೇಳಿಕೆ I ರಲ್ಲಿರುವ ಮಾಹಿತಿಯೊಂದೇ ಸಾಕಾಗುತ್ತದೆ, ಆದರೆ ಹೇಳಿಕೆ II ರಲ್ಲಿರುವ ಮಾಹಿತಿಯೊಂದೇ ಸಾಕಾಗುವುದಿಲ್ಲ
✗ B. ಹೇಳಿಕೆ I ಮತ್ತು ಹೇಳಿಕೆ II ಇವೆರಡರ ಒಟ್ಟುಗೂಡಿಸಿದ ಮಾಹಿತಿಗಳು (ಕೇವಲ ಹೇಳಿಕೆ I ಒಂದೇ ಅಲ್ಲ ಅಥವಾ ಕೇವಲ ಹೇಳಿಕೆ II ಒಂದೇ ಅಲ್ಲ) ಪ್ರಶ್ನೆಗೆ ಉತ್ತರಿಸಲು ಸಾಕಾಗುತ್ತವೆ
✗ C. ಪ್ರಶ್ನೆಗೆ ಉತ್ತರಿಸಲು ಹೇಳಿಕೆ II ರಲ್ಲಿರುವ ಮಾಹಿತಿಯೊಂದೇ ಸಾಕಾಗುತ್ತದೆ, ಆದರೆ ಹೇಳಿಕೆ I ರಲ್ಲಿರುವ ಮಾಹಿತಿಯೊಂದೇ ಸಾಕಾಗುವುದಿಲ್ಲ
✓ D. ಹೇಳಿಕೆ I ಮತ್ತು ಹೇಳಿಕೆ II ಎರಡರ ಮಾಹಿತಿಗಳನ್ನು ಒಟ್ಟಾಗಿಸಿದರೂ ಪ್ರಶ್ನೆಗೆ ಉತ್ತರಿಸಲು ಸಾಕಾಗುವುದಿಲ್ಲ

Q.24 ಆನಂದ್, ಅರವಿಂದ್ ಮತ್ತು ನವದೀಪ್ ಅವರು 8 : 10 : 9 ಅನುಪಾತದಲ್ಲಿ ಹೂಡಿಕೆ ಮಾಡಿ ಒಂದು ಪಾಲುದಾರಿಕೆಯ ವ್ಯವಹಾರದಲ್ಲಿ ತೊಡಗಿದರು. ವ್ಯವಹಾರದ ಅವಧಿಯ ಕೊನೆಯಲ್ಲಿ, ಅವರು ತಮ್ಮ ಒಟ್ಟು ಲಾಭವನ್ನು 10 : 11 : 15 ಅನುಪಾತದಲ್ಲಿ ಹಂಚಿಕೊಂಡರು. ಹಾಗಾದರೆ ಅವರು ಹೂಡಿಕೆ ಮಾಡಿದ್ದ ಸಮಯದ ಅನುಪಾತ ಕಂಡುಹಿಡಿಯಿರಿ.

Ans
✗ A. 75 : 66 : 90
✗ B. 85 : 66 : 100
✓ C. 75 : 66 : 100
✗ D. 75 : 76 : 100

Q.25 ಈ ಕೆಳಗಿನ ಸರಣಿಯಲ್ಲಿರುವ ಪ್ರಶ್ನಾರ್ಥಕ ಚಿಹ್ನೆಯ (?) ಜಾಗಕ್ಕೆ ಹಾಕಿದಾಗ ಸರಣಿಯನ್ನು ತರ್ಕಬದ್ಧವಾಗಿ ಪೂರ್ಣಗೊಳಿಸುವ ಅಕ್ಷರ-ಸಂಖ್ಯೆ ಗುಚ್ಛ ಯಾವುದು?

EFG10 FHI12 GJK14 HLM16 ?

Ans
- ✗ A. JMO18
- ✗ B. IMO18
- ✓ C. INO18
- ✗ D. JNO18

Q.26 B, E, G, R, U ಮತ್ತು V ಎಂಬವರು ಒಂದೇ ಕಟ್ಟಡದ ಆರು ಬೇರೆ ಬೇರೆ ಮಹಡಿಗಳಲ್ಲಿ ವಾಸಿಸುತ್ತಿದ್ದಾರೆ. ಅತ್ಯಂತ ಕೆಳಗಿನ ಮಹಡಿಯನ್ನು ಸಂಖ್ಯೆ 1ರಿಂದ ಗುರುತಿಸಿದರೆ, ಅದರ ಮೇಲಿನ ಮಹಡಿಯನ್ನು ಸಂಖ್ಯೆ 2ರಿಂದ ಗುರುತಿಸಲಾಗಿದೆ. ಹೀಗೆಯೇ ಮುಂದುವರಿದು ಅತ್ಯಂತ ಮೇಲಿನ ಮಹಡಿಯನ್ನು ಸಂಖ್ಯೆ 6ರಿಂದ ಗುರುತಿಸಲಾಗಿದೆ. U ಅವರು ಬೆಸ ಸಂಖ್ಯೆಯ ಮಹಡಿಯಲ್ಲಿ ವಾಸಿಸುತ್ತಿದ್ದಾರೆ, ಆದರೆ ಮಹಡಿ ಸಂಖ್ಯೆ 3 ಅಲ್ಲ. U ಮತ್ತು E ವಾಸಿಸುವ ಮಹಡಿಗಳ ಸಂಖ್ಯೆಗಳ ಮೊತ್ತವು 7 ಆಗಿದೆ. G ಅವರು Bಯ ತಕ್ಷಣದ ಕೆಳಗೆ ವಾಸಿಸುತ್ತಿದ್ದಾರೆ. V ಅವರು ಅತ್ಯಂತ ಮೇಲಿನ ಮಹಡಿಯಲ್ಲಿ ವಾಸಿಸುತ್ತಿದ್ದಾರೆ. ಹಾಗಾದರೆ B ಯ ಕೆಳಗೆ ಎಷ್ಟು ಜನರು ವಾಸಿಸುತ್ತಿದ್ದಾರೆ?

Ans
- ✓ A. 3
- ✗ B. 2
- ✗ C. 1
- ✗ D. 4

Q.27 ತ್ರಿಭುಜದ ಬಾಹುಗಳು 10 ಮಾನಗಳು, 9 ಮಾನಗಳು ಮತ್ತು x ಮಾನಗಳಾಗಿವೆ. ಹಾಗಾದರೆ, x ನ ಯಾವ ಮೌಲ್ಯಕ್ಕೆ ತ್ರಿಭುಜದ ವಿಸ್ತೀರ್ಣವು ಗರಿಷ್ಠವಾಗಿರುತ್ತದೆಯೋ ಆ ಮೌಲ್ಯವನ್ನು ಕಂಡುಹಿಡಿಯಿರಿ.

Ans
- ✗ A. $\sqrt{151}$
- ✓ B. $\sqrt{181}$
- ✗ C. $\sqrt{171}$
- ✗ D. $\sqrt{161}$

Q.28 16 ಸದಸ್ಯರ ಒಂದು ಕಂಪನಿಯ ತಂಡದ ಸರಾಸರಿ ವಯಸ್ಸು 40 ವರ್ಷಗಳು ಆಗಿದ್ದರೆ, 4 ಸದಸ್ಯರ ಮತ್ತೊಂದು ತಂಡದ ಸರಾಸರಿ ವಯಸ್ಸು 30 ವರ್ಷಗಳು. ಹಾಗಾದರೆ, ಎಲ್ಲಾ 20 ತಂಡದ ಸದಸ್ಯರ ಒಟ್ಟುಗೂಡಿಸಿದ ಸರಾಸರಿ ವಯಸ್ಸು ಎಷ್ಟು?

Ans
- ✗ A. 40 ವರ್ಷಗಳು
- ✓ B. 38 ವರ್ಷಗಳು
- ✗ C. 34 ವರ್ಷಗಳು
- ✗ D. 36 ವರ್ಷಗಳು

Q.29 16611 ಎಂಬ ಸಂಖ್ಯೆಯು ಈ ಕೆಳಗಿನ ಯಾವ ಸಂಖ್ಯೆಯಿಂದ ನಿಶ್ಯೇಷವಾಗಿ ಭಾಗಿಸಲ್ಪಡುತ್ತದೆ?

Ans
- ✗ A. 55
- ✗ B. 54
- ✗ C. 42
- ✓ D. 49

Q.30 TRASHED ಎಂಬ ಪದದಲ್ಲಿನ ಪ್ರತಿಯೊಂದು ಸ್ವರಾಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಅನುಕ್ರಮದಲ್ಲಿ ಅದರ ತಕ್ಷಣದ ಮುಂದಿನ ಅಕ್ಷರಕ್ಕೆ ಬದಲಾಯಿಸಲಾಗಿದೆ ಮತ್ತು ಪ್ರತಿ ವ್ಯಂಜನಾಕ್ಷರವನ್ನು ಆಂಗ್ಲ ವರ್ಣಮಾಲೆಯ ಅನುಕ್ರಮದಲ್ಲಿ ಅದರ ತಕ್ಷಣದ ಹಿಂದಿನ ಅಕ್ಷರದೊಂದಿಗೆ ಬದಲಾಯಿಸಲಾಗುತ್ತದೆ. ಹೀಗೆ ರೂಪುಗೊಂಡ ಹೊಸ ಅಕ್ಷರ ಗುಚ್ಛದಲ್ಲಿ ಯಾವ ಅಕ್ಷರವು ಎಡದಿಂದ ಮೂರನೇ ಸ್ಥಾನದಲ್ಲಿರುತ್ತದೆ?

Ans
- ✓ A. B
- ✗ B. Q
- ✗ C. R
- ✗ D. G

blackbook

Q.31 ಈ ಕೆಳಗಿನ ವರ್ಗೀಕೃತ ದತ್ತಾಂಶದ ಮಧ್ಯಾಂಕವನ್ನು ಕಂಡುಹಿಡಿಯಿರಿ.

ವರ್ಗಾಂತರ	15-23	23-31	31-39	39-47	47-55
ಆವೃತ್ತಿ	3	7	10	6	4

Ans
- ✗ A. 28
- ✗ B. 36
- ✓ C. 35
- ✗ D. 24

Q.32 ಈ ಕೆಳಗಿನ ಅಕ್ಷರ ಸರಣಿಯನ್ನು ಪರಿಶೀಲಿಸಿ ಮತ್ತು ಕೆಳಗಿನ ಪ್ರಶ್ನೆಗೆ ಉತ್ತರಿಸಿ. ಎಣಿಕೆಯನ್ನು ಎಡದಿಂದ ಬಲಕ್ಕೆ ಮಾತ್ರ ಮಾಡಬೇಕು.

(ಎಡ) Y Z T G N K E B A P L O Y U N E O B F V T K S A O D X (ಬಲ)

ಸರಣಿಯ ಬಲ ತುದಿಯಿಂದ ನಾಲ್ಕನೇ ಮತ್ತು ಎಡ ತುದಿಯಿಂದ ನಾಲ್ಕನೇ ಅಕ್ಷರದ ನಡುವೆ ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಎಷ್ಟು ಅಕ್ಷರಗಳಿವೆ?

Ans
- ✗ A. ನಾಲ್ಕು
- ✓ B. ಐದು
- ✗ C. ಮೂರು
- ✗ D. ಆರು

Q.33 ದುರ್ಬಲ ಹೈಡ್ರೋಕ್ಲೋರಿಕ್ ಆಮ್ಲವು ಸೋಡಿಯಂ ಕಾರ್ಬೋನೇಟ್‌ನೊಂದಿಗೆ ವರ್ತಿಸಿದಾಗ ಯಾವ ಅನಿಲವು ಬಿಡುಗಡೆಯಾಗುತ್ತದೆ?

Ans
- ✗ A. ಕ್ಲೋರಿನ್ ಅನಿಲ ಬಿಡುಗಡೆಯಾಗುತ್ತದೆ
- ✗ B. ಜಲಜನಕ ಅನಿಲ ಬಿಡುಗಡೆಯಾಗುತ್ತದೆ
- ✗ C. ಸಲ್ಫರ್ ಡೈಆಕ್ಸೈಡ್ ಬಿಡುಗಡೆಯಾಗುತ್ತದೆ
- ✓ D. ಇಂಗಾಲದ ಡೈಆಕ್ಸೈಡ್ ಬಿಡುಗಡೆಯಾಗುತ್ತದೆ

Q.34 ಒಂದುವೇಳೆ $75^{0.58} = x$, $75^{0.76} = y$ ಮತ್ತು $x^z = y^9$ ಆಗಿದ್ದರೆ, z ನ ಮೌಲ್ಯ ಎಷ್ಟು? (ಹತ್ತಿರದ ಪೂರ್ಣಾಂಕಕ್ಕೆ ಸೀಮಿತಗೊಳಿಸಿ)

Ans
- ✗ A. 11
- ✗ B. 13
- ✗ C. 14
- ✓ D. 12

Q.35 ಮೇ 2026 ರಲ್ಲಿ, ಕೇರಳ ಮೂಲದ ಯಾವ ಫ್ಯಾಬ್ಲೆಸ್ ಸೆಮಿಕಂಡಕ್ಟರ್ ನವೋದ್ಯಮವು, ಸ್ಮಾರ್ಟ್ ಕಣ್ಗಾವಲು ಕ್ಯಾಮೆರಾಗಳು, ಎಡ್ಜ್ AI ಬಾಕ್ಸ್‌ಗಳು ಮತ್ತು ವೀಡಿಯೊ ಗೇಟ್‌ವೇಗಳಿಗಾಗಿ ವಿನ್ಯಾಸಗೊಳಿಸಲಾದ ಭಾರತದ ಮೊದಲ ಸ್ವದೇಶಿಯ AI ಸಿಸ್ಟಮ್-ಆನ್-ಚಿಪ್ (SoC) ಅನ್ನು ಪ್ರಾರಂಭಿಸಿತು?

Ans
- ✓ A. ನೇತ್ರಸೆಮಿ
- ✗ B. ಮೈಂಡ್‌ಗ್ರೋವ್ ಟೆಕ್ನಾಲಜೀಸ್
- ✗ C. ಇನ್‌ಕೋರ್ ಸೆಮಿಕಂಡಕ್ಟರ್ಸ್
- ✗ D. ಸಾಂಖ್ಯ ಲ್ಯಾಬ್ಸ್

Q.36 ಒಂದುವೇಳೆ 678214 ಎಂಬ ಸಂಖ್ಯೆಯಲ್ಲಿನ ಪ್ರತಿಯೊಂದು ಬೆಸ ಅಂಕಿಗೆ 2 ಅನ್ನು ಕೂಡಿಸಿದರೆ ಮತ್ತು ಪ್ರತಿಯೊಂದು ಸಮ ಅಂಕಿಯಿಂದ 1 ಅನ್ನು ಕಳೆದರೆ, ಹೀಗೆ ರೂಪುಗೊಂಡ ಹೊಸ ಸಂಖ್ಯೆಯಲ್ಲಿ ಎಷ್ಟು ಅಂಕಿ(ಗಳು) ಒಂದಕ್ಕಿಂತ ಹೆಚ್ಚು ಬಾರಿ ಕಾಣಿಸಿಕೊಳ್ಳುತ್ತವೆ?

Ans
- ✗ A. ಮೂರು
- ✓ B. ಒಂದು
- ✗ C. ಎರಡು
- ✗ D. ಯಾವುದೂ ಇಲ್ಲ

blackbook

Q.37 ಈ ಪ್ರಶ್ನೆಯು ಕೆಳಗೆ ನೀಡಿರುವ ಪದಗಳನ್ನು ಆಧರಿಸಿದೆ.

OAK JOE FED IMP

ಪ್ರತಿಯೊಂದು ಪದದಲ್ಲಿಯೂ, ಪ್ರತಿಯೊಂದು ಸ್ವರಾಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಅದರ ತಕ್ಷಣದ ಮುಂದಿನ ಅಕ್ಷರಕ್ಕೆ ಬದಲಾಯಿಸಲಾಗುತ್ತದೆ ಮತ್ತು ಪ್ರತಿ ವ್ಯಂಜನಾಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಅದರ ತಕ್ಷಣದ ಹಿಂದಿನ ಅಕ್ಷರಕ್ಕೆ ಬದಲಾಯಿಸಲಾಗುತ್ತದೆ. ಹೀಗೆ ರೂಪುಗೊಂಡ ಎಷ್ಟು ಅಕ್ಷರ ಸಮೂಹಗಳಲ್ಲಿ ಯಾವುದೇ ಸ್ವರಾಕ್ಷರ ಕಾಣಿಸುವುದಿಲ್ಲ?

Ans
- ✗ A. ನಾಲ್ಕು
- ✗ B. ಮೂರು
- ✗ C. ಎರಡು
- ✓ D. ಒಂದು

Q.38 27, 18 ಮತ್ತು 36 ಸಂಖ್ಯೆಗಳು ಒಂದು ಸಮಾನುಪಾತವನ್ನು ರೂಪಿಸುತ್ತವೆ. ನಾಲ್ಕನೇ ಸಮಾನುಪಾತ ಯಾವುದು?

Ans
- ✗ A. 26
- ✗ B. 22
- ✗ C. 20
- ✓ D. 24

Q.39 E, F, G, H, I, J, K ಮತ್ತು L ಎಂಬ ಎಂಟು ಸ್ನೇಹಿತರು ವೃತ್ತಾಕಾರದ ಮೇಜಿನ ಸುತ್ತಲೂ ಮೇಜಿನ ಮಧ್ಯಭಾಗಕ್ಕೆ ಮುಖಮಾಡಿ ಕುಳಿತಿದ್ದಾರೆ.
K ಅವರು J ಅವರ ಬಲಕ್ಕೆ ಮೂರನೆಯವರಾಗಿ ಕುಳಿತಿದ್ದಾರೆ.
I ಅವರು L ಅವರ ಎಡಕ್ಕೆ ಎರಡನೆಯವರಾಗಿ ಕುಳಿತಿದ್ದಾರೆ.
F ಅವರು K ಮತ್ತು I ಅವರ ತಕ್ಷಣದ ನೆರೆಹೊರೆಯವರು.
G ಅವರು H ಅವರ ಎಡಕ್ಕೆ ಮೂರನೆಯವರಾಗಿ ಕುಳಿತಿದ್ದಾರೆ.

ಹಾಗಾದರೆ, L ಅವರಿಗೆ ಸಂಬಂಧಿಸಿದಂತೆ E ಅವರ ಸ್ಥಾನ ಯಾವುದು?

Ans
- ✗ A. ಎಡಕ್ಕೆ ಮೂರನೆಯ
- ✗ B. ಬಲಕ್ಕೆ ಎರಡನೆಯ
- ✓ C. ಬಲಕ್ಕೆ ಮೂರನೆಯ
- ✗ D. ಬಲಕ್ಕೆ ನಾಲ್ಕನೆಯ

Q.40 ಕೇಶವ್ ಅವರು A ಬಿಂದುವಿನಿಂದ ಚಾಲನೆಯನ್ನು ಆರಂಭಿಸಿ ಪಶ್ಚಿಮಕ್ಕೆ 13 km ಚಲಾಯಿಸುತ್ತಾರೆ. ನಂತರ ಅವರು ಎಡಕ್ಕೆ ತಿರುಗಿ 11 km ಚಲಾಯಿಸುತ್ತಾರೆ. ನಂತರ ಅವರು ಎಡಕ್ಕೆ ತಿರುಗಿ 15 km ಚಲಾಯಿಸುತ್ತಾರೆ. ನಂತರ ಅವರು ಎಡಕ್ಕೆ ತಿರುಗಿ 16 km ಚಲಾಯಿಸುತ್ತಾರೆ. ಅಂತಿಮವಾಗಿ ಅವರು ಎಡಕ್ಕೆ ತಿರುಗಿ 2 km ಚಲಾಯಿಸಿ P ಬಿಂದುವಿನಲ್ಲಿ ನಿಲ್ಲುತ್ತಾರೆ. ಹಾಗಾದರೆ ಮತ್ತೆ ಅವರು A ಬಿಂದುವನ್ನು ತಲುಪಲು ಎಷ್ಟು ದೂರ (ಅತ್ಯಂತ ಕಡಿಮೆ ದೂರ) ಮತ್ತು ಯಾವ ದಿಕ್ಕಿನಲ್ಲಿ ಚಲಾಯಿಸಬೇಕು?(ನಿರ್ದಿಷ್ಟವಾಗಿ ಸೂಚಿಸದ ಹೊರತು ಎಲ್ಲಾ ತಿರುವುಗಳು ಕೇವಲ 90° ತಿರುವುಗಳಾಗಿವೆ.)

Ans
- ✗ A. 3 km ಉತ್ತರಕ್ಕೆ
- ✗ B. 4 km ದಕ್ಷಿಣಕ್ಕೆ
- ✗ C. 4 km ಉತ್ತರಕ್ಕೆ
- ✓ D. 5 km ದಕ್ಷಿಣಕ್ಕೆ

Q.41 C, D, E, F, X, Y ಮತ್ತು Z ಎಂಬ ಏಳು ಪೆಟ್ಟಿಗೆಗಳನ್ನು ಒಂದರ ಮೇಲೊಂದರಂತೆ ಇಡಲಾಗಿದೆ. ಆದರೆ ಅವುಗಳು ಅದೇ ಕ್ರಮದಲ್ಲಿ ಇರಬೇಕಂತೇನಿಲ್ಲ. X ಮೇಲೆ ಮೂರು ಪೆಟ್ಟಿಗೆಗಳನ್ನು ಮಾತ್ರ ಇಡಲಾಗಿದೆ. F ಮತ್ತು X ನಡುವೆ ಒಂದು ಪೆಟ್ಟಿಗೆಯನ್ನು ಮಾತ್ರ ಇಡಲಾಗಿದೆ. F ಮತ್ತು C ನಡುವೆ ಮೂರು ಪೆಟ್ಟಿಗೆಗಳನ್ನು ಮಾತ್ರ ಇಡಲಾಗಿದೆ. C ಅನ್ನು X ನ ಮೇಲಿನ ಸ್ಥಾನವೊಂದರಲ್ಲಿ ಇಡಲಾಗಿದೆ. E ಅನ್ನು C ಯ ತಕ್ಷಣದ ಕೆಳಗೆ ಇಡಲಾಗಿದೆ. Z ಅನ್ನು D ಯ ಮೇಲಿನ ಸ್ಥಾನವೊಂದರಲ್ಲಿ ಇಡಲಾಗಿದೆ. Y ಅನ್ನು F ನ ತಕ್ಷಣದ ಮೇಲೆ ಅಥವಾ ತಕ್ಷಣ ಕೆಳಗೆ ಇಡಲಾಗಿಲ್ಲ. ಹಾಗಾದರೆ ಯಾವ ಪೆಟ್ಟಿಗೆಯನ್ನು ಅತ್ಯಂತ ಕೆಳಗಿನ ಸ್ಥಾನದಲ್ಲಿ ಇಡಲಾಗಿದೆ?

Ans
- ✗ A. Y
- ✓ B. D
- ✗ C. C
- ✗ D. X

blackbook

Q.42 ಇಂಗ್ಲಿಷ್ ವರ್ಣಮಾಲೆಯ ಕ್ರಮವನ್ನು ಆಧರಿಸಿ, ಈ ಕೆಳಗಿನ ನಾಲ್ಕರಲ್ಲಿ ಮೂರು ಅಕ್ಷರ-ಗುಚ್ಛ ಜೋಡಿಗಳು ಒಂದು ನಿರ್ದಿಷ್ಟ ರೀತಿಯಲ್ಲಿ ಸದೃಶವಾಗಿದ್ದು ಒಂದೇ ಗುಂಪಿಗೆ ಸೇರಿವೆ. ಆ ಗುಂಪಿಗೆ ಸೇರದ ಅಕ್ಷರ-ಗುಚ್ಛ ಜೋಡಿ ಯಾವುದು?
(ಗಮನಿಸಿ: ಗುಂಪಿಗೆ ಸೇರದ ಅಕ್ಷರ-ಗುಚ್ಛದಲ್ಲಿನ ವ್ಯಂಜನಗಳು/ಸ್ವರಗಳ ಸಂಖ್ಯೆ ಅಥವಾ ಅವುಗಳ ಸ್ಥಾನಗಳನ್ನು ಆಧರಿಸಿ ಗುಂಪಿಗೆ ಸೇರದ್ದು ಅಲ್ಲ.)

Ans
- ✗ A. NK–GD
- ✗ B. IF–BY
- ✓ C. TQ–LL
- ✗ D. LI–EB

Q.43 ಈ ಪ್ರಶ್ನೆಯು ಕೆಳಗೆ ನೀಡಲಾದ ಮೂರು-ಅಂಕಿಗಳುಳ್ಳ ಐದು ಸಂಖ್ಯೆಗಳನ್ನು ಆಧರಿಸಿದೆ.
(ಎಡ) 594 247 578 426 947 (ಬಲ)
(ಉದಾಹರಣೆಗೆ- 697ರಲ್ಲಿ – ಮೊದಲ ಅಂಕಿ = 6, ಎರಡನೇ ಅಂಕಿ = 9 ಮತ್ತು ಮೂರನೇ ಅಂಕಿ = 7)
ಸೂಚನೆ: ಎಲ್ಲಾ ಕ್ರಿಯೆಗಳನ್ನು ಎಡದಿಂದ ಬಲಕ್ಕೆ ಮಾಡಬೇಕು.
ಒಂದು ವೇಳೆ ಅತಿ ದೊಡ್ಡ ಸಂಖ್ಯೆಯ ಮೂರನೇ ಅಂಕಿಯನ್ನು ಅತಿ ಕಡಿಮೆ ಸಂಖ್ಯೆಯ ಮೂರನೇ ಅಂಕಿಗೆ ಕೂಡಿಸಿದರೆ ಸಿಗುವ ಸಂಖ್ಯೆ ಯಾವುದು?

Ans
- ✗ A. 18
- ✓ B. 14
- ✗ C. 6
- ✗ D. 10

Q.44 ಇಂಗ್ಲಿಷ್ ವರ್ಣಮಾಲೆಯ ಕ್ರಮವನ್ನು ಆಧರಿಸಿ, ಈ ಕೆಳಗಿನ ನಾಲ್ಕರಲ್ಲಿ ಮೂರು ಅಕ್ಷರ-ಗುಚ್ಛಗಳು ಒಂದು ನಿರ್ದಿಷ್ಟ ರೀತಿಯಲ್ಲಿ ಸದೃಶವಾಗಿದ್ದು ಒಂದೇ ಗುಂಪಿಗೆ ಸೇರಿವೆ. ಆ ಗುಂಪಿಗೆ ಸೇರದ ಅಕ್ಷರ-ಗುಚ್ಛ ಯಾವುದು?
(ಗಮನಿಸಿ: ಗುಂಪಿಗೆ ಸೇರದ ಅಕ್ಷರ-ಗುಚ್ಛವು ಅದರಲ್ಲಿನ ವ್ಯಂಜನಗಳು/ಸ್ವರಗಳ ಸಂಖ್ಯೆ ಅಥವಾ ಅಕ್ಷರ-ಗುಚ್ಛದಲ್ಲಿ ಅವುಗಳ ಸ್ಥಾನಗಳನ್ನು ಆಧರಿಸಿ ಗುಂಪಿಗೆ ಸೇರದ್ದು ಅಲ್ಲ.)

Ans
- ✗ A. YBE
- ✗ B. EHK
- ✓ C. FLI
- ✗ D. TWZ

Q.45 ದ್ವಿನಾಮಕರಣ ಪದ್ಧತಿಯಲ್ಲಿ ಪ್ರಭೇದದ ಹೆಸರು _____ ಮತ್ತು ಸಂತತಿಯನ್ನು ಉತ್ಪಾದಿಸುವ ಸಾಮರ್ಥ್ಯವಿರುವ ಜೀವಿಗಳ ಘಟಕವನ್ನು ಸೂಚಿಸುತ್ತದೆ.

Ans
- ✗ A. ಸ್ಪರ್ಧಿಸುವ
- ✗ B. ಶೀತಸುಪ್ತಾವಸ್ಥೆ ಹೊಂದಿರುವಿಕೆ (hibernating)
- ✓ C. ಮಿಶ್ರತಳಿ ಮಾಡುವ (interbreeding)
- ✗ D. ವಲಸೆಯ

Q.46 ಒಂದು ನಲ್ಲಿಯು ಒಂದು ತೊಟ್ಟಿಯನ್ನು 6 ಗಂಟೆಗಳಲ್ಲಿ ತುಂಬಿಸುತ್ತದೆ. ಇನ್ನೊಂದು ನಲ್ಲಿಯು ಪೂರ್ಣ ತೊಟ್ಟಿಯನ್ನು 12 ಗಂಟೆಗಳಲ್ಲಿ ಖಾಲಿ ಮಾಡುತ್ತದೆ. ಒಂದು ವೇಳೆ ತೊಟ್ಟಿಯು ಆರಂಭದಲ್ಲಿ ಖಾಲಿಯಾಗಿದ್ದರೆ ಮತ್ತು ಎರಡೂ ಕೊಳವೆಗಳನ್ನು ಒಟ್ಟಿಗೆ ತೆರೆದರೆ, ಅದು ತೊಟ್ಟಿಯ ನಾಲ್ಕನೇ ಮೂರು ಭಾಗವನ್ನು ತುಂಬಿಸಲು ಎಷ್ಟು ಸಮಯ ತೆಗೆದುಕೊಳ್ಳುತ್ತದೆ (ಗಂಟೆಗಳಲ್ಲಿ)?

Ans
- ✗ A. 27
- ✗ B. 18
- ✓ C. 9
- ✗ D. 36

Q.47 ಒಂದು ನಿರ್ದಿಷ್ಟ ಸಂಕೇತ ಭಾಷೆಯಲ್ಲಿ, 'GLOW' ಎಂಬುದನ್ನು '5928' ಎಂದು ಸಂಕೇತಿಸಲಾಗಿದೆ ಮತ್ತು 'LOWS' ಎಂಬುದನ್ನು '2894' ಎಂದು ಸಂಕೇತಿಸಲಾಗಿದೆ. ಹಾಗಾದರೆ ನೀಡಿರುವ ಸಂಕೇತ ಭಾಷೆಯಲ್ಲಿ 'S' ಎಂಬುದರ ಸಂಕೇತ ಯಾವುದು?

Ans
- ✓ A. 4
- ✗ B. 9
- ✗ C. 2
- ✗ D. 5

blackbook

Q.48 $\frac{3.8^4 - 4.9^4}{3.8^2 + 4.9^2}$ ಇದರ ಮೌಲ್ಯವನ್ನು ಕಂಡುಹಿಡಿಯಿರಿ.

Ans
- ✗ A. 8.75
- ✓ B. -9.57
- ✗ C. 1.18
- ✗ D. -7.56

Q.49 ಇಂಗ್ಲಿಷ್ ವರ್ಣಮಾಲೆಯ ಕ್ರಮವನ್ನು ಆಧರಿಸಿದ ಒಂದು ನಿರ್ದಿಷ್ಟ ರೀತಿಯಲ್ಲಿ AROW ಎಂಬುದು HYVD ಎಂಬುದಕ್ಕೆ ಸಂಬಂಧಿಸಿದೆ. ಅದೇ ರೀತಿಯಲ್ಲಿ, CTQY ಎಂಬುದು JAXF ಎಂಬುದಕ್ಕೆ ಸಂಬಂಧಿಸಿದೆ. ಅದೇ ತರ್ಕವನ್ನು ಅನುಸರಿಸಿದಾಗ, XOLT ಎಂಬುದು ನೀಡಿರುವ ಆಯ್ಕೆಗಳಲ್ಲಿ ಯಾವುದಕ್ಕೆ ಸಂಬಂಧಿಸಿದೆ?

Ans
- ✗ A. EASW
- ✗ B. EXCD
- ✓ C. EVSA
- ✗ D. ESQW

Q.50 ಒಂದು ನಿರ್ದಿಷ್ಟ ಸಂಕೇತ ಭಾಷೆಯಲ್ಲಿ, 'GEAR' ಎಂಬುದನ್ನು '7543' ಎಂದು ಸಂಕೇತಿಸಲಾಗಿದೆ ಮತ್ತು 'REAP' ಎಂಬುದನ್ನು '3257' ಎಂದು ಸಂಕೇತಿಸಲಾಗಿದೆ. ಹಾಗಾದರೆ ನೀಡಿರುವ ಸಂಕೇತ ಭಾಷೆಯಲ್ಲಿ 'P' ಎಂಬುದರ ಸಂಕೇತ ಯಾವುದು?

Ans
- ✗ A. 3
- ✗ B. 7
- ✓ C. 2
- ✗ D. 4

Q.51 FORGETS ಎಂಬ ಪದದಲ್ಲಿನ ಪ್ರತಿಯೊಂದು ಅಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಜೋಡಿಸಿದರೆ ಎಷ್ಟು ಅಕ್ಷರಗಳ ಸ್ಥಾನ (ಗಳು) ಬದಲಾಗದೆ ಹಾಗೆಯೇ ಉಳಿಯುತ್ತದೆ (ವೆ)?

Ans
- ✗ A. 3
- ✗ B. 1
- ✗ C. 2
- ✓ D. 0

Q.52 ಸಂಖ್ಯೆ 12, ಒಂದು ನಿರ್ದಿಷ್ಟ ತರ್ಕವನ್ನು ಅನುಸರಿಸಿ ಸಂಖ್ಯೆ 48 ಕ್ಕೆ ಸಂಬಂಧಿಸಿದೆ. ಅದೇ ತರ್ಕದಂತೆ ಸಂಖ್ಯೆ 14, ಸಂಖ್ಯೆ 56 ಕ್ಕೆ ಸಂಬಂಧಿಸಿದೆ. ಅದೇ ತರ್ಕವನ್ನು ಅನುಸರಿದರೆ ಸಂಖ್ಯೆ 23 ಈ ಕೆಳಗಿನ ಯಾವ ಆಯ್ಕೆಗೆ ಸಂಬಂಧಿಸಿದೆ?

(ಸೂಚನೆ: ಸಂಖ್ಯೆಗಳನ್ನು ಅವುಗಳ ಬಿಡಿ ಅಂಕಿಗಳಾಗಿ ವಿಭಜಿಸದೆ, ಪೂರ್ಣ ಸಂಖ್ಯೆಗಳ ಮೇಲೆ ಕ್ರಿಯೆಗಳನ್ನು ನಿರ್ವಹಿಸಬೇಕು. ಉದಾ: 13 ಅನ್ನು ತೆಗೆದುಕೊಳ್ಳೋಣ. 13ಕ್ಕೆ ಕೂಡಿಸುವುದು/ಕಳೆಯುವುದು/ಗುಣಿಸುವುದು ಇತ್ಯಾದಿ ಕ್ರಿಯೆಗಳನ್ನು ಮಾಡಬಹುದು. 13 ಅನ್ನು 1 ಮತ್ತು 3 ಎಂದು ವಿಭಜಿಸಿ ನಂತರ 1 ಮತ್ತು 3 ರ ಮೇಲೆ ಗಣಿತದ ಕ್ರಿಯೆಗಳನ್ನು ಮಾಡಲು ಅವಕಾಶವಿಲ್ಲ.)

Ans
- ✗ A. 98
- ✓ B. 92
- ✗ C. 88
- ✗ D. 82

Q.53 ಈ ಕೆಳಗಿನ ಸರಣಿಯಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಸ್ಥಾನದಲ್ಲಿ ಯಾವ ಆಯ್ಕೆ ಬರಬೇಕು?

35, 39, 47, 59, 75, ?

Ans
- ✗ A. 97
- ✗ B. 96
- ✓ C. 95
- ✗ D. 94

Black

Q.54 ಕೆಳಗಿನ ಸರಣಿಯಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಸ್ಥಳದಲ್ಲಿ ಯಾವ ಆಯ್ಕೆ ಬರಬೇಕು?
235 172 141 126 119 ?

Ans
- ✗ A. 121
- ✓ B. 116
- ✗ C. 120
- ✗ D. 115

Q.55 $\frac{\sqrt{\sec^2 A-1}}{1-\cot A}+\frac{\sqrt{\operatorname{cosec}^2 A-1}}{1-\tan A}-1-\sqrt{\sec^2 A-1}-\sqrt{\operatorname{cosec}^2 A-1}$
ಇದರ ಮೌಲ್ಯವನ್ನು ಕಂಡುಹಿಡಿಯಿರಿ.

Ans
- ✗ A. 3
- ✓ B. 4
- ✗ C. tan A + cot A
- ✗ D. tan A

Q.56 ಕೆಳಗೆ ನೀಡಲಾದ ಎರಡು ಜೋಡಿಗಳು ಯಾವ ಮಾದರಿಯನ್ನು ಅನುಸರಿಸುತ್ತವೆಯೋ ಅದೇ ಮಾದರಿಯನ್ನು ಅನುಸರಿಸುವ ಜೋಡಿಯನ್ನು ಆಯ್ಕೆ ಮಾಡಿ. ಈ ಎರಡೂ ಜೋಡಿಗಳು ಒಂದೇ ಮಾದರಿಯನ್ನು ಅನುಸರಿಸುತ್ತವೆ.

OLH–LIE
EBX–BYU

Ans
- ✓ A. TQM–QNJ
- ✗ B. TQM–PNI
- ✗ C. TPK–QNJ
- ✗ D. TPK–PMI

Q.57 P, Q, R, S ಮತ್ತು T ಎಂಬವರು ಬೇರೆ ಬೇರೆ ಅಂಕಗಳನ್ನು ಗಳಿಸಿದ್ದಾರೆ. ಕೇವಲ ಎರಡು ಜನರು S ಗಿಂತ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ. P ಅವರು T ಗಿಂತ ಹೆಚ್ಚು, ಆದರೆ R ಗಿಂತ ಕಡಿಮೆ ಅಂಕಗಳನ್ನು ಗಳಿಸಿದ್ದಾರೆ. Q ಅವರು ಅತಿ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ.
ಹಾಗಾದರೆ ಎರಡನೇ ಅತಿ ಹೆಚ್ಚು ಅಂಕಗಳನ್ನು ಯಾರು ಗಳಿಸಿದ್ದಾರೆ?

Ans
- ✗ A. T
- ✗ B. S
- ✓ C. R
- ✗ D. P

Q.58 ಜಮಖಾನೆ ಮತ್ತು ಪರದೆಗಳನ್ನು ಹೊಂದಿರುವ ತರಗತಿ ಕೊಠಡಿಗೆ ಹೋಲಿಸಿದರೆ, ಬರಿದಾದ ಗೋಡೆಗಳು ಮತ್ತು ಟೈಲ್ ಹಾಕಲಾದ ನೆಲವನ್ನು ಹೊಂದಿರುವ ತರಗತಿ ಕೊಠಡಿಯು ಏಕೆ ಹೆಚ್ಚು ಅನುರಣನೆಯನ್ನು ಹೊಂದಿರಬಹುದು?

Ans
- ✓ A. ಗಟ್ಟಿಯಾದ ಮೇಲ್ಮೈಗಳು ಹೆಚ್ಚು ಶಬ್ದವನ್ನು ಪ್ರತಿಫಲಿಸುತ್ತವೆ, ಇದರಿಂದಾಗಿ ಅನುರಣನೆಯನ್ನು ಹೆಚ್ಚಿಸುತ್ತವೆ
- ✗ B. ದಪ್ಪವಾದ ಗೋಡೆಗಳು ಹೆಚ್ಚು ಶಬ್ದವನ್ನು ಹಿಡಿದಿಟ್ಟುಕೊಳ್ಳುತ್ತವೆ, ಇದರಿಂದಾಗಿ ಪ್ರತಿಧ್ವನಿಗಳು ಉಂಟಾಗುತ್ತವೆ
- ✗ C. ದೊಡ್ಡ ಕೊಠಡಿಗಳು ಯಾವಾಗಲೂ ಹೆಚ್ಚಿನ ಅನುರಣನೆಯನ್ನು ಉಂಟುಮಾಡುತ್ತವೆ
- ✗ D. ಕೊಠಡಿಯ ಮೂಲಕ ವಿದ್ಯಾರ್ಥಿಗಳ ಗದ್ದಲವು ಹೆಚ್ಚಾಗುತ್ತದೆ

Q.59 ಭಾರತೀಯ ಸಂವಿಧಾನದ ಯಾವ ಅನುಚ್ಛೇದವು ಗುಡಿ ಕೈಗಾರಿಕೆಗಳನ್ನು ಉತ್ತೇಜಿಸಲು ರಾಜ್ಯಕ್ಕೆ ನಿರ್ದೇಶಿಸುತ್ತದೆ?

Ans
- ✗ A. ಅನುಚ್ಛೇದ 40
- ✗ B. ಅನುಚ್ಛೇದ 44
- ✗ C. ಅನುಚ್ಛೇದ 48
- ✓ D. ಅನುಚ್ಛೇದ 43

Q.60 ಈ ಕೆಳಗೆ ಒಂದು ಪ್ರಶ್ನೆಯನ್ನು ನೀಡಲಾಗಿದೆ ಮತ್ತು ಅದರ ನಂತರ (I) ಮತ್ತು (II) ಎಂದು ಸಂಖ್ಯೆಗಳನ್ನು ನೀಡಿದ ಎರಡು ಹೇಳಿಕೆಗಳನ್ನು ನೀಡಲಾಗಿದೆ. ಈ ಹೇಳಿಕೆಗಳಲ್ಲಿ ನೀಡಲಾದ ಮಾಹಿತಿಯು ಪ್ರಶ್ನೆಗೆ ಉತ್ತರಿಸಲು ಸಾಕಾಗುತ್ತದೆಯೇ ಎಂದು ನೀವು ನಿರ್ಧರಿಸಬೇಕು. ಈ ಎರಡೂ ಹೇಳಿಕೆಗಳನ್ನು ಓದಿರಿ ಮತ್ತು ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿರಿ.

ಪ್ರಶ್ನೆ:
K, S, P, H ಮತ್ತು T ಎಂಬ 5 ಕೋಲುಗಳಲ್ಲಿ, ಪ್ರತಿಯೊಂದು ಬೇರೆ ಬೇರೆ ಎತ್ತರವನ್ನು ಹೊಂದಿದ್ದು, ಯಾವ ಕೋಲು ಅತ್ಯಂತ ಎತ್ತರವಾಗಿದೆ?

ಹೇಳಿಕೆಗಳು:
(I) K ಯು H ಗಿಂತ ಎತ್ತರವಾಗಿದೆ, ಆದರೆ T ಗಿಂತ ಚಿಕ್ಕದಾಗಿದೆ. K ಯು ಒಂದು ಕೋಲಿಗಿಂತ ಮಾತ್ರ ಚಿಕ್ಕದಾಗಿದೆ.
(II) H ಕೋಲು S ಗಿಂತ ಎತ್ತರವಾಗಿದೆ.

Ans
✗ A. ಹೇಳಿಕೆ I ಮತ್ತು ಹೇಳಿಕೆ II ಎರಡರ ಮಾಹಿತಿಗಳನ್ನು ಒಟ್ಟಾಗಿಸಿದರೂ ಪ್ರಶ್ನೆಗೆ ಉತ್ತರಿಸಲು **ಸಾಕಾಗುವುದಿಲ್ಲ**

✗ B. ಪ್ರಶ್ನೆಗೆ ಉತ್ತರಿಸಲು ಹೇಳಿಕೆ II ರಲ್ಲಿರುವ ಮಾಹಿತಿಯೊಂದೇ ಸಾಕಾಗುತ್ತದೆ, ಆದರೆ ಹೇಳಿಕೆ I ರಲ್ಲಿರುವ ಮಾಹಿತಿಯೊಂದೇ ಸಾಕಾಗುವುದಿಲ್ಲ

✗ C. ಹೇಳಿಕೆ I ಮತ್ತು ಹೇಳಿಕೆ II ಇವೆರಡರ ಒಟ್ಟುಗೂಡಿಸಿದ ಮಾಹಿತಿಗಳು (ಕೇವಲ ಹೇಳಿಕೆ I ಒಂದೇ ಅಲ್ಲ ಅಥವಾ ಕೇವಲ ಹೇಳಿಕೆ II ಒಂದೇ ಅಲ್ಲ) ಪ್ರಶ್ನೆಗೆ ಉತ್ತರಿಸಲು ಸಾಕಾಗುತ್ತವೆ

✓ D. ಪ್ರಶ್ನೆಗೆ ಉತ್ತರಿಸಲು ಹೇಳಿಕೆ I ರಲ್ಲಿರುವ ಮಾಹಿತಿಯೊಂದೇ ಸಾಕಾಗುತ್ತದೆ, ಆದರೆ ಹೇಳಿಕೆ II ರಲ್ಲಿರುವ ಮಾಹಿತಿಯೊಂದೇ ಸಾಕಾಗುವುದಿಲ್ಲ

Q.61 ಒಬ್ಬ ವ್ಯಕ್ತಿಯು ₹56,500 ಮೊತ್ತವನ್ನು ವಾರ್ಷಿಕ 6% ಸರಳ ಬಡ್ಡಿದರದಲ್ಲಿ 4 ವರ್ಷಗಳ ಅವಧಿಗೆ ಹೂಡಿಕೆ ಮಾಡಿದನು. ಹಾಗಾದರೆ 4 ವರ್ಷಗಳ ನಂತರ ಅವನಿಗೆ ಸಿಗುವ ಮೊತ್ತವನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

Ans
✗ A. 72,060

✓ B. 70,060

✗ C. 72,600

✗ D. 70,600

Q.62 ಒಬ್ಬ ಫ್ರೀಲ್ಯಾನ್ಸರ್ ತನ್ನ ಮಾಸಿಕ ಆದಾಯದ 72% ಅನ್ನು ಖರ್ಚು ಮಾಡುತ್ತಾನೆ ಮತ್ತು ಉಳಿದ ಹಣವನ್ನು ಉಳಿತಾಯ ಮಾಡುತ್ತಾನೆ. ಒಂದುವೇಳೆ ಅವನ ಮಾಸಿಕ ಆದಾಯವು ₹25,000 ಆಗಿದ್ದರೆ, ಅವನು ಪ್ರತಿ ತಿಂಗಳು ಎಷ್ಟು ಉಳಿತಾಯ (₹ ಗಳಲ್ಲಿ) ಮಾಡುತ್ತಾನೆ?

Ans
✗ A. 8,000

✗ B. 6,500

✗ C. 7,500

✓ D. 7,000

Q.63 ಬಿಸಿ ಕ್ಷಾರೀಯ $KMnO_4$ ಉಪಸ್ಥಿತಿಯಲ್ಲಿ ಎಥೆನಾಲ್ ಉತ್ಕರ್ಷಣಗೊಂಡು _____ ಅನ್ನು ರೂಪಿಸುತ್ತದೆ.

Ans
✓ A. ಎಥನೋಯಿಕ್ ಆಮ್ಲ

✗ B. ಈಥೈಲ್ ಅಸಿಟೇಟ್

✗ C. ಅಸಿಟೋನ್

✗ D. ಎಥನಾಲ್

Q.64 ಇಂಗ್ಲಿಷ್ ವರ್ಣಮಾಲೆಯ ಅನುಕ್ರಮವನ್ನು ಆಧರಿಸಿ EHFJ ಎಂಬುದು ನಿರ್ದಿಷ್ಟ ರೀತಿಯಲ್ಲಿ FIGK ಗೆ ಸಂಬಂಧಿಸಿದೆ. ಅದೇ ರೀತಿಯಲ್ಲಿ, WZXB ಎಂಬುದು XAYC ಗೆ ಸಂಬಂಧಿಸಿದೆ. ಅದೇ ತರ್ಕವನ್ನು ಅನುಸರಿಸಿದಾಗ ಈ ಕೆಳಗಿನವುಗಳಲ್ಲಿ ಯಾವುದಕ್ಕೆ ADBF ಸಂಬಂಧಿಸಿದೆ?

Ans
✗ A. BFBI

✗ B. BDBG

✗ C. BEBG

✓ D. BECG

Q.65 ಒಬ್ಬ ಅಂಗಡಿಯವನು ಒಂದೇ ರೀತಿಯ ಆರು ಮೊಬೈಲ್ ಫೋನ್ ಗಳನ್ನು ₹75,000 ಕ್ಕೆ ಖರೀದಿಸಿದನು. ಅವನು ಅವುಗಳಲ್ಲಿ ಎರಡನ್ನು ₹66,000 ಗಳಿಗೆ ಮಾರಿದನು. ಮಾರಾಟವಾದ ಎರಡು ಮೊಬೈಲ್ ಫೋನ್ ಗಳ ಪೈಕಿ ಅವನು ಗಳಿಸಿದ ಶೇಕಡಾವಾರು ಲಾಭ ಎಷ್ಟು?

Ans
✓ A. 164%

✗ B. 166%

✗ C. 165%

✗ D. 167%

blackbook

Q.66 ನೀವು 150 ಚದರ ಸೆಂಟಿಮೀಟರ್ ಗಳ ಒಟ್ಟು ಗೋಚರ ಮೇಲ್ಮೈ ವಿಸ್ತೀರ್ಣವನ್ನು ಹೊಂದಿರುವ ಒಂದು ಘನ ಆಧಾರಿತ ಕಲಾ ಶಿಲ್ಪವನ್ನು ವಿನ್ಯಾಸಗೊಳಿಸಲು ಬಯಸುತ್ತೀರಿ. ಒಂದು ವೇಳೆ ಆ ಘನದ ಮೂರು ಮುಖಗಳು ಮಾತ್ರ ಗೋಚರಿಸುತ್ತಿದ್ದರೆ, ಆ ಘನದ ಅಂಚಿನ ಉದ್ದ (ಸೆಂಟಿಮೀಟರ್ ಗಳಲ್ಲಿ) ಎಷ್ಟಿರಬೇಕು?

Ans

✗ A. 5

✓ B. $5\sqrt{2}$

✗ C. $2\sqrt{5}$

✗ D. $7\sqrt{2}$

Q.67 ಆಹಾರ ಸರಪಳಿಗಳು ಸಾಮಾನ್ಯವಾಗಿ ಮೂರು ಅಥವಾ ನಾಲ್ಕು ಹಂತಗಳನ್ನು ಮಾತ್ರ ಏಕೆ ಒಳಗೊಂಡಿರುತ್ತವೆ?

Ans

✓ A. ಪ್ರತಿಯೊಂದು ಪೋಷಣಾ ಸ್ತರದಲ್ಲಿ ಗಮನಾರ್ಹವಾದ ಶಕ್ತಿಯ ನಷ್ಟ ಸಂಭವಿಸುತ್ತದೆ.

✗ B. ಉತ್ಪಾದಕರು ಸಾಕಷ್ಟು ಆಹಾರವನ್ನು ಉತ್ಪಾದಿಸಲು ಸಾಧ್ಯವಿಲ್ಲ.

✗ C. ಪರಿಸರ ವ್ಯವಸ್ಥೆಗಳಲ್ಲಿ ಕೆಲವು ಪ್ರಭೇದಗಳು ಮಾತ್ರ ಅಸ್ತಿತ್ವದಲ್ಲಿವೆ.

✗ D. ಮಾಂಸಾಹಾರಿಗಳಿಗಿಂತ ಸಸ್ಯಾಹಾರಿಗಳು ಹೆಚ್ಚು ಸಂಖ್ಯೆಯಲ್ಲಿವೆ.

Q.68 ಒಂದು ಸಿಲಿಂಡರಾಕಾರದ ಕಂಬವು 140 cm ವ್ಯಾಸ ಮತ್ತು 50 m ಎತ್ತರವನ್ನು ಹೊಂದಿದೆ. ಪ್ರತಿ m^2 ಗೆ ₹17 ದರದಲ್ಲಿ ಕಂಬದ ವಕ್ರ ಮೇಲ್ಮೈಗೆ ಬಣ್ಣ ಬಳಿಯಲು ತಗಲುವ ವೆಚ್ಚವನ್ನು ಕಂಡುಹಿಡಿಯಿರಿ.
($\pi = \frac{22}{7}$ ಬಳಸಿ)

Ans

✗ A. ₹3,761

✗ B. ₹3,697

✓ C. ₹3,740

✗ D. ₹3,786

Q.69 ನೀಡಲಾದ ಸರಣಿಯನ್ನು ತಾರ್ಕಿಕವಾಗಿ ಪೂರ್ಣಗೊಳಿಸಬೇಕಾದರೆ ಪ್ರಶ್ನಾರ್ಥಕ ಚಿಹ್ನೆಯ (?) ಜಾಗಕ್ಕೆ ಈ ಕೆಳಗಿನವುಗಳ ಪೈಕಿ ಯಾವ ಅಕ್ಷರ-ಸಂಖ್ಯಾ ಗುಚ್ಛವು ಬರಬೇಕು?

BSP 13, DPR 21, FMT 29, HJV 37, ?

Ans

✓ A. JGX 45

✗ B. GHX 43

✗ C. HGY 43

✗ D. KHW 41

Q.70 ಒಬ್ಬ ಅಂಗಡಿಯವರು kg ಗೆ ₹50 ಮತ್ತು ಪ್ರತಿ kg ಗೆ ₹70 ಬೆಲೆಯ ಎರಡು ಬಗೆಯ ಅಕ್ಕಿಯನ್ನು 3:2 ಅನುಪಾತದಲ್ಲಿ ಮಿಶ್ರಣ ಮಾಡುತ್ತಾನೆ. ಒಂದು ವೇಳೆ ಮಿಶ್ರಣವನ್ನು kg ಗೆ ₹66 ರಂತೆ ಮಾರಾಟ ಮಾಡಿದರೆ, ದೊರೆಯುವ ಶೇಕಡಾವಾರು ಲಾಭ ಎಷ್ಟು? (ನಿಮ್ಮ ಉತ್ತರವನ್ನು ಎರಡು ದಶಮಾಂಶ ಸ್ಥಾನಗಳಿಗೆ ಸರಿಹೊಂದಿಸಿ)

Ans

✗ A. 15.62%

✗ B. 10.48%

✗ C. 8.23%

✓ D. 13.79%

Q.71 HARMFUL ಎಂಬ ಪದದಲ್ಲಿರುವ, ಪ್ರತಿ ಅಕ್ಷರವನ್ನು ಇಂಗ್ಲೀಷ್ ವರ್ಣಮಾಲೆಯ ಅನುಕ್ರಮದಲ್ಲಿ ಜೋಡಿಸಲಾಗಿದೆ. ಹೀಗೆ ರೂಪುಗೊಂಡ ಹೊಸ ಅಕ್ಷರ ಸಮೂಹದಲ್ಲಿ ಎಡದಿಂದ ಮೂರನೇ ಅಕ್ಷರ ಮತ್ತು ಬಲದಿಂದ ಮೂರನೆಯ ಅಕ್ಷರದ ನಡುವೆ ಇಂಗ್ಲಿಷ್ ವರ್ಣಮಾಲೆಯ ಅನುಕ್ರಮದಲ್ಲಿ ಎಷ್ಟು ಅಕ್ಷರಗಳಿವೆ?

Ans

✓ A. 4

✗ B. 7

✗ C. 5

✗ D. 3

blackbook

Q.72 L, M, N, O, G, H ಮತ್ತು I ಅವರಲ್ಲಿ ಪ್ರತಿಯೊಬ್ಬರಿಗೂ ಸೋಮವಾರದಿಂದ ಪ್ರಾರಂಭವಾಗುವ ಮತ್ತು ಅದೇ ವಾರದ ಭಾನುವಾರ ಕೊನೆಗೊಳ್ಳುವ ರೀತಿ ಒಂದೇ ವಾರದ ಬೇರೆ ಬೇರೆ ದಿನಗಳಲ್ಲಿ ಪರೀಕ್ಷೆ ಇದೆ. M ನಂತರ ಮೂರು ಜನರಿಗೆ ಮಾತ್ರ ಪರೀಕ್ಷೆ ಇದೆ. O ಮತ್ತು M ನಡುವೆ ಒಬ್ಬರಿಗೆ ಮಾತ್ರ ಪರೀಕ್ಷೆ ಇದೆ. O ಅವರಿಗೆ M ಗಿಂತ ಮೊದಲು ಪರೀಕ್ಷೆ ಇದೆ. ನಾಲ್ಕು ಜನರಿಗೆ ಮಾತ್ರ N ಮತ್ತು O ನಡುವೆ ಪರೀಕ್ಷೆ ಇದೆ. L ಅವರಿಗೆ O ಅವರ ನಂತರ ಯಾವುದಾದರೊಂದು ದಿನ ಪರೀಕ್ಷೆ ಇದೆ. H ಅವರಿಗೆ G ಗಿಂತ ತಕ್ಷಣದ ಹಿಂದಿನ ದಿನ ಪರೀಕ್ಷೆ ಇದೆ. ಹಾಗಾದರೆ G ಮತ್ತು L ನಡುವೆ ಎಷ್ಟು ಜನರಿಗೆ ಪರೀಕ್ಷೆ ಇದೆ?

Ans
- ✗ A. ಒಂದು
- ✗ B. ಮೂರು
- ✓ C. ಎರಡು
- ✗ D. ನಾಲ್ಕು

Q.73 ಕೊಟ್ಟಿರುವ ಸರಣಿಯಲ್ಲಿನ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಯಾವ ಸಂಖ್ಯೆ ಬರಬೇಕು?
6 16 46 136 406 ?

Ans
- ✗ A. 1218
- ✗ B. 1220
- ✓ C. 1216
- ✗ D. 1214

Q.74 ಒಂದು ವಿಶಿಷ್ಟ ಸಂಕೇತ ಭಾಷೆಯಲ್ಲಿ, 'card log data' ಎಂಬುದನ್ನು 'sw dr ej' ಎಂದು ಸಂಕೇತಿಸಲಾಗಿದೆ ಮತ್ತು 'royal card ant' ಎಂಬುದನ್ನು 'dr wq og' ಎಂದು ಸಂಕೇತಿಸಲಾಗಿದೆ. ಹಾಗಾದರೆ ಅದೇ ಸಂಕೇತ ಭಾಷೆಯಲ್ಲಿ 'card' ಎಂಬುದನ್ನು ಹೇಗೆ ಸಂಕೇತಿಸಲಾಗುತ್ತದೆ?

Ans
- ✗ A. ej
- ✓ B. dr
- ✗ C. sw
- ✗ D. wq

Q.75 ಈ ಕೆಳಗಿನ ಸಮೀಕರಣದಲ್ಲಿ, ಒಂದುವೇಳೆ '+' ಮತ್ತು '−' ಗಳನ್ನು ಅದಲುಬದಲು ಮಾಡಿದರೆ ಹಾಗೂ '×' ಮತ್ತು '÷' ಗಳನ್ನು ಅದಲುಬದಲು ಮಾಡಿದರೆ ಪ್ರಶ್ನಾರ್ಥಕ ಚಿಹ್ನೆಯ (?) ಜಾಗದಲ್ಲಿ ಯಾವ ಸಂಖ್ಯೆಯು ಸರಿಹೊಂದುತ್ತದೆ?

12 ÷ 14 – 13 + 120 × 5 = ?

Ans
- ✗ A. 115
- ✓ B. 157
- ✗ C. 189
- ✗ D. 129

"

Bigbook